(ಊ) 4,11,961 ರೂ. ಗಳು.

(ಊ) ಏಳು ಪ್ರಕರಣಗಳಲ್ಲಿ ಮಾತ್ರ ಇಲ್ಲ.

(ಋ) 85,900 ರೂ. ಗಳು ಇದಕ್ಕೆ ಆಡಳಿತ ವರ್ಗದವರು ಜವಾಬ್ದಾರರು.

(ಋೂ) 1974-75ನೇ ಸಾಲಿನಲ್ಲಿ ಎರಡು ಸಲ.

(ಎ) ಹೌದು.

(ಏ) ಕಾನೂನು ಪ್ರಕಾರ ನೂಕ್ ಕ್ರಮ ಕೈಗೊಳ್ಳಲಾಗುತ್ತಿದೆ.

ದೊಡ್ಡ ಗೇಣಿಗರೆಯ ಶ್ರೀ ರಂಗನಾಥಸ್ವಾಮಿ ದೇವಸ್ಥಾನಕ್ಕೆ ಮಂಜೂರ್ಮಾಡಿದ ಪೊಬಲಗು

553. ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಕಂದಾಯ ಮಂತ್ರಿಗಳು ಈ ವಿಷಯ ಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ಹಾಸನ ತಾಲ್ಲೂಕ ಶಾಂತಿಗ್ರಾಮ ಹೋಬಳಿ ದೊಡ್ಡಗೇಣಿಗೆರೆ ಗ್ರಾಮದ ಶ್ರೀ ರಂಗನಾಥಸ್ವಾಮಿಯ ದೇವಸ್ಥಾನದ ಕಟ್ಟಡ ಕಟ್ಟಲು ಅಂದಾಜು ತಯಾರಾಗಿದೆಯೆ ? ಯಾವ ತಾರೀಖಿನಲ್ಲಿ ;

(ಆ) ಹಾಗಿದ್ದಲ್ಲಿ ಅಂದಾಜು ಪೊಬಲಗೆಷ್ಟು ;

(ಇ) ದೇವಸ್ಥಾನದ ಅಂದಾಜು ಪೊಬಲಗಿನಲ್ಲಿ ಸುಮಾರು ಹತ್ತು ಸಾವಿರ ರೂಪಾಯಿಗಳ ಕೆಲಸವನ್ನು ಗ್ರಾಮಸ್ಥರು ಮಾಡುವುದಾಗಿ ಸರಕಾರಕ್ಕೆ ಮುಚ್ಚಳಿಕ್ಕೆ ಬರೆದುಕೊಟ್ಟಿರುವುದು ನಿಜವಲ್ಲವೆ ;

(ಈ) ಗ್ರಾಮಸ್ಥರು ಯಾವ ತಾರೀಖಿನಲ್ಲಿ ಮುಚ್ಚಳಿಕೆ ಬರೆದುಕೊಟ್ಟರು ;

(ಉ) ಗ್ರಾಮಸ್ಥರು ಮುಚ್ಚಳಿಕೆ ಪ್ರಕಾರ ಹತ್ತು ಸಾವಿರ ರೂಪಾಯಿಗಳ ಕೆಲಸವನ್ನು ಈಗ್ಗೆ ಎರಡು ವರ್ಷಗಳ ಹಿಂದೆಯೇ ಮಾಡಿರುವುದು ನಿಜವಲ್ಲವೆ ;

(ಊ) ಗ್ರಾಮಸ್ಥರು ತಮ್ಮ ಕೋಟಾ ಹತ್ತು ಸಾವಿರ ರೂಪಾಯಿಗಳ ಕೆಲಸವನ್ನು ಮಾಡಿ ರುವುದಾಗಿಯೂ ಸರಕಾರ ಮುಜರಾಯಿ ಫಂಡಿನಿಂದ ಸುಮಾರು ಎಂಟು ಸಾವಿರ ರೂಪಾಯಿ ಗಳನ್ನು ಮಂಜೂರು ಮಾಡಿ ದೇವಸ್ಥಾನದ ಕೆಲಸವನ್ನು ಪೂರ್ತಿಮಾಡಬೇಕೆಂದು ಯಾವ ತಾರೀಖಿನಲ್ಲಿ ಹಾಸನ ಜಿಲ್ಲಾಧಿಕಾರಿಗಳು ಸರಕಾರಕ್ಕೆ ಶಿಫಾರಸು ಮಾಡಿದ್ದಾರೆ ;

(ಏ) ಈ ದೇವಸ್ಥಾನದ ಕೆಲಸವನ್ನು ಪೂರೈಸಲು ಸರಕಾರ ಮುಜರಾಯಿ ಫಂಡಿನಿಂದ ಹಣವನ್ನು ಮಂಜೂರು ಮಾಡಿಕೊಟ್ಟು ಈ ಕೆಲಸವನ್ನು ಯಾವಾಗ ಪೂರೈಸಲು ಉದ್ದೇಶ ಹೊಂದಿದೆ ?

ಶ್ರೀ ಎನ್. ಹುಚ್ಚಮಾಸಿಗೌಡ (ಕಂದಾಯ ಮಂತ್ರಿಗಳು).—

(ಅ) ಹೌದು, 17ನೇ ಜುಲೈ 1970

(ಆ) 17,300 ರೂಪಾಯಿಗಳು

(ಇ) ನಿಜ.

(ಈ) 26ನೇ ಮೇ 1971

(ಉ) ಇಲ್ಲ. ಈ ದೇವಸ್ಥಾನವು ಮುಜರಾಯಿ ಇಲಾಖೆಗೆ ಒಳಪಟ್ಟಿಲ್ಲದ ನಂಸ್ಥೆ ಆಗಿದ್ದು ಈ ಗ್ರಾಮಸ್ಥರು ದೇವಸ್ಥಾನದ ಪುನರುಜ್ಜೀವನಕ್ಕೆ ಪೂರ್ವಭಾವಿಯಾಗಿ ತಾವೇ ಹಳೆಯ ದೇವಸ್ಥಾನ ವನ್ನು ಕೆಡವಿ ತಳಹದಿ ತೆಗೆದು ಹೊಸ ಕಟ್ಟಡಕ್ಕೆ ಅಡಿಪಾಯ ಹಾಕಿಸಿರುತ್ತಾರೆ ಎಂದು ವರದಿಯಾಗಿದೆ

(ಊ) ಸರಕಾರಕ್ಕೆ ಯಾವ ಶಿಫಾರಸೂ ಇಂದಿನವರೆಗೆ ಬಂದಿಲ್ಲ.

(ಋ) ಈಗಿನ ನಿಯಮದಂತೆ ಭಕ್ತಾದಿಗಳು 2/3 ಭಾಗ ವಂತಿಕೆಯನ್ನು ಸಲ್ಲಿಸಿದ್ದಲ್ಲಿ 1/3 ಭಾಗ ಹಣ ಸರ್ಕಾರ ಗ್ರಾಂಟ್ ರೂಪದಲ್ಲಿ ಕೊಡಲು ಅವಕಾಶವಿದೆ. ಆದರೆ ಈ ದೇವಸ್ಥಾನದ ಕೆಲಸಕ್ಕೆ ಗ್ರಾಂಟ್ ಕೊಡುವ ಪ್ರಶ್ನೆಯಾಗಲಿ, ಕೆಲಸವನ್ನು ಪೂರ್ತಿಸುವ ಪ್ರಶ್ನೆಯಾಗಲಿ ಇನ್ನೂ ಉದ್ಭವಿಸಿಲ್ಲ.

ನಿಯಂತ್ರಿತ ದರದಲ್ಲಿ ವಿದ್ಯಾರ್ಥಿನಿಲಯಗಳಿಗೆ ಆಹಾರ ಧಾನ್ಯಗಳನ್ನು ಸರಬರಾಜು ಮಾಡುವುದು

681. ಶ್ರೀ ಎ. ನಂಜಪ್ಪ (ಅರಸೀಕೆರೆ).—ಶಿಕ್ಷಣ ಮಂತ್ರಿಗಳು ಈ ವಿಷಯಗಳನ್ನು ದಯೆ ವಿಟ್ಟು ತಿಳಿಸುವರೆ.—

(ಅ) ಸರಕಾರದವರು ವಿದ್ಯಾರ್ಥಿ ನಿಲಯಗಳಿಗೆ ನಿಯಂತ್ರಿತ ದರದಲ್ಲಿ ಆಹಾರ ಪದಾರ್ಥಗಳನ್ನು ಒದಗಿಸುವುದರಿಂದ ವಿದ್ಯಾರ್ಥಿಗಳಿಗೆ ಉತ್ತಮ ಬೋಜನ ಮತ್ತು ಫಲಹಾರದ ವ್ಯವಸ್ಥೆ ಮಾಡಲು ಸರಕಾರದವರು ಕ್ರಮ ತೆಗೆದುಕೊಳ್ಳುವುದೇ.

(ಆ) ಸರಕಾರಿ ವಿದ್ಯಾರ್ಥಿನಿಲಯಗಳಲ್ಲಿ ವಿಧ್ಯಾರ್ಥಿಗಳಿಗೆ ರಿಯಾಯತಿ ದರದಲ್ಲಿ ತಿಂಗಳಿಗೆ ರೂ. 50-00ಗಳಿಗೆ ಮೀರದಂತೆ ಭೋಜನದ ವ್ಯವಸ್ಥೆ ಮಾಡುವುದಕ್ಕೆ ಸರಕಾರದವರು ವ್ಯವಸ್ಥೆ ಮಾಡುವರೇ.

ಶ್ರೀ ಎಂ ಮಲ್ಲಿಕಾರ್ಜುನಸ್ವಾಮಿ (ಶಿಕ್ಷಣ ಮಂತ್ರಿಗಳು).—

(ಅ) ನಿಯಂತ್ರಿತ ದರದಲ್ಲಿ ಆಹಾರ ಪದಾರ್ಥಗಳನ್ನು ಒದಗಿಸಲು ಸರ್ಕಾರವು ಈಗಾಗಲೇ ಕ್ರಮ ತೆಗೆದುಕೊಂಡಿದೆ.

(ಆ) ಇಲ್ಲ.

CALLING ATTENTION TO A MATTERS OF URGENT PUBLIC IMPORTANCE

re : *Non-payment of dues by the Myleaf Tobacco Development Co.. Ltd.*

SRI B. G. BANAKAR. (Byadagi).—I call the attention of the Minister for Agriculture to a matter relating to non-payment of dues by the Myleaf Tobacco Company Ltd.

1-30 P. M.

SRI N. CHIKKEGOWDA (Minister for Agriculture) :— I beg to make the following statement :—

The Myleaf Tobacco Development Company Limited Davanagere is a private company started during 1972 and has been working for the development of V.P.C Tobacco in the transitional belt of the State. The important areas of operation of the company are in Chitradurga, Shimoga and Dharwar districts. The Company has also purchased Tobacco in Mysore and Mandya districts.